**All India Radio: Bangalore**
**National Bulletin In Kannada**
**25.10.2025 1.10 p.m.**

ಆಕಾಶವಾಣಿ, ಬೆಂಗಳೂರು

ರಾಷ್ಟ್ರೀಯ ವಾರ್ತೆಗಳು

**25.10.2025 1.10 p.m.**

**<><><><>**

ಮುಖ್ಯಾಂಶಗಳು

1. ದೇಶಾದ್ಯಂತ ಇಂದಿನಿಂದ ನಾಲ್ಕು ದಿನ ಛತ್ ಪೂಜೆ: ಪ್ರಧಾನಿ ಸೇರಿ ಹಲವು ಗಣ್ಯರಿಂದ ದೇಶದ ಜನತೆಗೆ ಶುಭಾಶಯ
2. ನಾಳೆ ೧೧ ಗಂಟೆಗೆ ಆಕಾಶವಾಣಿಯಲ್ಲಿ ಮನ್ ಕಿ ಬಾತ್ ಕಾರ್ಯಕ್ರಮ: ಭಾರತೀಯರನ್ನುದ್ದೇಶಿಸಿ ಪ್ರಧಾನಿ ನರೇಂದ್ರ ಮೋದಿ ಭಾಷಣ
3. ಬಿಹಾರ ವಿಧಾನಸಭಾ ಚುನಾವಣೆ: ಪ್ರಚಾರದಲ್ಲಿ ಕೃತಕ ಬುದ್ಧಿಮತ್ತೆ - ಸಂಶ್ಲೇಷಿತ ವಿಷಯ ಬಳಕೆಗೆ ಚುನಾವಣಾ ಆಯೋಗದಿಂದ ಹೊಸ ಮಾರ್ಗಸೂಚಿ
4. ಭಾರತ - ಆಸ್ಟ್ರೇಲಿಯಾ ಮೂರನೇ ಏಕದಿನ ಕ್ರಿಕೆಟ್ ಪಂದ್ಯ: ಭಾರತಕ್ಕೆ ೨೩೭ರನ್ ಗುರಿ

<><><><>

ಪ್ರಧಾನಿ ನರೇಂದ್ರ ಮೋದಿ ಅವರು ಛತ್ ಮಹಾಪರ್ವದ ಸಂದರ್ಭದಲ್ಲಿ ದೇಶ ಮತ್ತು ವಿಶ್ವಾದ್ಯಂತ ನೆಲೆಸಿರುವ ಭಕ್ತರಿಗೆ ಹಾರ್ದಿಕ ಶುಭಾಶಯಗಳನ್ನು ಕೋರಿದ್ದಾರೆ. ಈ ಸಂಬಂಧ ಸಾಮಾಜಿಕ ಮಾಧ್ಯಮ ಪೋಸ್ಟ್ ನಲ್ಲಿ ಪ್ರತಿಕ್ರಿಯಿಸಿರುವ ಪ್ರಧಾನಿ, ಎಲ್ಲಾ ವ್ರತಗಳ ಅಚಲ ಭಕ್ತಿಗೆ ಗೌರವ ಸಲ್ಲಿಸಿದ್ದಾರೆ ಮತ್ತು ಇಂದಿನಿಂದ ನಾಲ್ಕು ದಿನಗಳ ಹಬ್ಬದ ಆಳವಾದ ಸಾಂಸ್ಕೃತಿಕ ಮಹತ್ವವನ್ನು ಬಿಂಬಿಸಿದ್ದಾರೆ. ಛತ್‌ಗೆ ಹೆಚ್ಚುತ್ತಿರುವ ಜಾಗತಿಕ ಮನ್ನಣೆಯನ್ನು ಬಿಂಬಿಸಿದ ಪ್ರಧಾನಿ, ವಿಶ್ವದಾದ್ಯಂತದ ಭಾರತೀಯ ಕುಟುಂಬಗಳು ಅದರ ಆಚರಣೆಯಲ್ಲಿ ಹೃತ್ಪೂರ್ವಕ ಭಕ್ತಿಯಿಂದ ಭಾಗವಹಿಸುತ್ತವೆ ಎಂದು ಹೇಳಿದ್ದಾರೆ. ಹಾಗೆಯೇ ಈ ಸಂದರ್ಭದ ಅಂಗವಾಗಿ, ಪ್ರಧಾನಿ ಅವರು, ಛಠಿ ಮಾಯ್ಯರಿಗೆ ಸಮರ್ಪಿತವಾದ ಭಕ್ತಿ ಗೀತೆಯನ್ನು ಸಹ ಹಂಚಿಕೊಂಡಿದ್ದು, ಪ್ರತಿಯೊಬ್ಬರೂ ಅದರ ಆಧ್ಯಾತ್ಮಿಕ ಮಾಧುರ್ಯದಲ್ಲಿ ಮಿಂದೇಳುವಂತೆ ಕರೆ ನೀಡಿದ್ದಾರೆ. ಈ ಭವ್ಯ ಉತ್ಸವವು ಸರಳತೆ ಮತ್ತು ಸಂಯಮದ ಸಂಕೇತವಾಗಿದೆ, ಅದರ ಪಾವಿತ್ರ್ಯ ಹಾಗೂ ನಿಯಮಗಳ ಅನುಸರಣೆಗೆ ಸರಿಸಾಟಿಯಿಲ್ಲ ಎಂದು ಪ್ರಧಾನಿ ಹೇಳಿದ್ದಾರೆ. ಈ ಪವಿತ್ರ ಸಂದರ್ಭದಲ್ಲಿ, ಛತ್

ಘಾಟ್‌ಗಳಲ್ಲಿ ಗೋಚರಿಸುವ ದೃಶ್ಯವು ಕೌಟುಂಬಿಕ ಮತ್ತು ಸಾಮಾಜಿಕ ಸಾಮರಸ್ಯದ ಅದ್ಭುತ ಸ್ಫೂರ್ತಿಯನ್ನು ನೀಡುತ್ತದೆ ಎಂದು ಅವರು ತಿಳಿಸಿದ್ದಾರೆ.

<><><>

ಕೇಂದ್ರ ಗೃಹ ಸಚಿವ ಅಮಿತ್ ಶಾ ಛತ್ ಪೂಜೆಯ ಅಂಗವಾಗಿ ದೇಶದ ಜನತೆಗೆ ಶುಭಾಶಯ ಕೋರಿದ್ದಾರೆ. ಈ ಸಂಬಂಧ ಸಾಮಾಜಿಕ ಮಾಧ್ಯಮ ಪೋಸ್ಟ್ ಮಾಡಿರುವ ಅವರು, ನಹಾಯ್-ಖಾಯ್ ಆಚರಣೆಯೊಂದಿಗೆ ಪ್ರಾರಂಭವಾಗುವ ಛತ್ ಪೂಜಾ ಹಬ್ಬವು ಸಂಪ್ರದಾಯ, ನಂಬಿಕೆ ಮತ್ತು ಸಾಮಾಜಿಕ ಸಾಮರಸ್ಯದ ಆಚರಣೆಯಾಗಿದೆ ಎಂದು ಅವರು ಹೇಳಿದ್ದಾರೆ.

<><><>

ಪ್ರಧಾನಿ ನರೇಂದ್ರ ಮೋದಿ ಅವರು ನಾಳೆ ಆಕಾಶವಾಣಿಯ 'ಮನ್ ಕಿ ಬಾತ್' ಕಾರ್ಯಕ್ರಮದಲ್ಲಿ ದೇಶ ಮತ್ತು ವಿದೇಶಗಳಲ್ಲಿನ ಭಾರತೀಯರೊಂದಿಗೆ ತಮ್ಮ ಅನಿಸಿಕೆಗಳನ್ನು ಹಂಚಿಕೊಳ್ಳಲಿದ್ದಾರೆ. ಇದು ಅವರ ಮಾಸಿಕ ರೇಡಿಯೋ ಕಾರ್ಯಕ್ರಮದ ೧೨೭ನೇ ಸಂಚಿಕೆಯಾಗಲಿದೆ. ಆಕಾಶವಾಣಿ ಮತ್ತು ದೂರದರ್ಶನದ ಎಲ್ಲ ವಾಹಿನಿಗಳು, ಎಐಆರ್ ನ್ಯೂಸ್ ಜಾಲತಾಣ, ನ್ಯೂಸ್ ಆನ್ ಏರ್ ಮೊಬೈಲ್ ಆಪ್‌ನಲ್ಲಿ ಕಾರ್ಯಕ್ರಮ ಬಿತ್ತರಗೊಳ್ಳಲಿದೆ. ಅಲ್ಲದೆ ಎಐಆರ್ ನ್ಯೂಸ್, ಡಿಡಿ ನ್ಯೂಸ್, ಪ್ರಧಾನಮಂತ್ರಿ ಕಾರ್ಯಾಲಯ ಹಾಗೂ ವಾರ್ತಾ ಮತ್ತು ಪ್ರಸಾರ ಸಚಿವಾಲಯದ ಯೂಟ್ಯೂಬ್ ವಾಹಿನಿಗಳಲ್ಲಿ ನೇರ ಪ್ರಸಾರವಾಗಲಿದೆ. ಹಿಂದಿ ಅವತರಣಿಕೆಯ ನಂತರ ಪ್ರಾದೇಶಿಕ ಭಾಷೆಗಳಲ್ಲೂ ಆಕಾಶವಾಣಿ ಈ ಕಾರ್ಯಕ್ರಮವನ್ನು ಪ್ರಸಾರ ಮಾಡಲಿದೆ.

<><><>

ಬಿಹಾರ ವಿಧಾನಸಭಾ ಚುನಾವಣೆಗೆ ಮುನ್ನ ರಾಜಕೀಯ ಪ್ರಚಾರದಲ್ಲಿ ಕೃತಕ ಬುದ್ಧಿಮತ್ತೆ ಮತ್ತು ಸಂಶ್ಲೇಷಿತ ವಿಷಯವನ್ನು ಬಹಿರಂಗಪಡಿಸಲು ಹಾಗೂ ಜವಾಬ್ದಾರಿಯುತವಾಗಿ ಬಳಸಲು ಕಠಿಣ ನಿಯಮಗಳನ್ನು ವಿವರಿಸುವ ಹೊಸ ಮಾರ್ಗಸೂಚಿಯನ್ನು ಭಾರತೀಯ ಚುನಾವಣಾ ಆಯೋಗ ಹೊರಡಿಸಿದೆ. ರಾಜಕೀಯ ಪಕ್ಷಗಳು, ಅಭ್ಯರ್ಥಿಗಳು ಮತ್ತು ಪ್ರಚಾರ ಪ್ರತಿನಿಧಿಗಳು ಪ್ರಚಾರ ಉದ್ದೇಶಗಳಿಗಾಗಿ ಬಳಸುವ ಅಥವಾ ಪ್ರಸಾರ ಮಾಡುವ ಯಾವುದೇ ಕೃತಕ ಬುದ್ಧಿಮತ್ತೆಯಿಂದ ರಚಿಸಲಾದ ಇಲ್ಲವೇ ಕೃತಕ ಬುದ್ಧಿಮತ್ತೆಯಿಂದ ಮಾರ್ಪಡಿಸಿದ ಚಿತ್ರ, ಆಡಿಯೋ ಅಥವಾ ವಿಡಿಯೊವನ್ನು ಕೃತಕ ಬುದ್ಧಿಮತ್ತೆ- ಉತ್ಪತ್ತಿ, ಡಿಜಿಟಲ್ ವರ್ಧಿತ ಅಥವಾ ಸಂಶ್ಲೇಷಿತ ವಿಷಯ ಎಂದು ಹೆಸರಿಸುವಂತೆ ಆಯೋಗವು ಸೂಚಿಸಿದೆ. ಎಲ್ಲಾ ರಾಜಕೀಯ ಪಕ್ಷಗಳು, ಅಭ್ಯರ್ಥಿಗಳು

ಮತ್ತು ಪ್ರಚಾರ ಪ್ರತಿನಿಧಿಗಳು ಚುನಾವಣಾ ಪ್ರಚಾರಕ್ಕಾಗಿ ಬಳಸುವ ಯಾವುದೇ ಕೃತಕ ಬುದ್ಧಿಮತೆಯಿಂದ ರಚಿಸಲಾದ ಅಥವಾ ಡಿಜಿಟಲ್ ಮೂಲಕ ಮಾರ್ಪಡಿಸಲಾದ ಚಿತ್ರಗಳು, ವಿಡಿಯೊಗಳು ಅಥವಾ ಆಡಿಯೊಗಳ ಗೋಚರ ಪ್ರದರ್ಶನ, ತೆರೆಯ ಕನಿಷ್ಠ ಶೇಕಡ ೧೦ ರಷ್ಟು ಮತ್ತು ಧ್ವನಿ ಮುದ್ರಣದಲ್ಲಿ ಸ್ಪಷ್ಟ ಮತ್ತು ಪ್ರಮುಖ ಲೇಬಲ್ ಹೊಂದಿರುವುದನ್ನು ಖಚಿತಪಡಿಸಿಕೊಳ್ಳಬೇಕು ಎಂದು ಆಯೋಗ ನಿರ್ದೇಶಿಸಿದೆ. ಇವುಗಳನ್ನು ಹಂಚಿಕೊಳ್ಳುವಾಗ ಅತ್ಯಂತ ಜಾಗರೂಕತೆಯಿಂದ ಇರಬೇಕೆಂದು ಚುನಾವಣಾ ಆಯೋಗ ಹೇಳಿದೆ.

<><><>

ಚುನಾವಣಾ ಆಯೋಗವು ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳ ಮುಖ್ಯ ಚುನಾವಣಾ ಅಧಿಕಾರಿಗಳಿಗೆ ಪ್ರತಿ ಮತಗಟ್ಟೆಯು ಮತದಾನದ ದಿನದಂದು ಭರವಸೆಯ ಕನಿಷ್ಠ ಸೌಲಭ್ಯ ಮತ್ತು ಮತದಾರರ ಸಹಾಯ ಕೇಂದ್ರವನ್ನು ಹೊಂದಿದೆಯೇ ಎಂಬುದನ್ನು ಖಚಿತಪಡಿಸಿಕೊಳ್ಳುವಂತೆ ನಿರ್ದೇಶನ ನೀಡಿದೆ. ಬಿಹಾರದಲ್ಲಿ ಮುಂದಿನ ತಿಂಗಳ ೬ ಮತ್ತು ೧೧ ರಂದು ವಿಧಾನಸಭಾ ಚುನಾವಣೆ ನಡೆಯಲಿದ್ದು, ಏಳು ರಾಜ್ಯಗಳ ಉಪಚುನಾವಣೆ ನವೆಂಬರ್ ೧೧ ರಂದು ನಡೆಯಲಿದೆ. ಕುಡಿಯುವ ನೀರು, ಕಾಯುವ ಶೆಡ್, ನೀರಿನ ಸೌಲಭ್ಯದೊಂದಿಗೆ ಶೌಚಾಲಯ, ಸಾಕಷ್ಟು ಬೆಳಕು, ವಿಶೇಷ ಚೇತನರಿಗೆ ಸರಿಯಾದ ಇಳಿಜಾರು ರಾಂಪ್, ಪ್ರಮಾಣಿತ ಮತದಾನ ವಿಭಾಗ ಮತ್ತು ಸರಿಯಾದ ಸೂಚನಾ ಫಲಕಗಳು ಭರವಸೆಯ ಕನಿಷ್ಠ ಸೌಲಭ್ಯಗಳಾಗಿವೆ.

<><><>

ರಾಷ್ಟ್ರೀಯ ಪಿಂಚಣಿ ವ್ಯವಸ್ಥೆ - ಎನ್‌ಪಿಎಸ್ ಮತ್ತು ಏಕೀಕೃತ ಪಿಂಚಣಿ ಯೋಜನೆ - ಯುಪಿಎಸ್ ಎರಡರ ಅಡಿಯಲ್ಲಿ ಕೇಂದ್ರ ಸರ್ಕಾರಿ ನೌಕರರಿಗೆ ಎಲ್ಸಿ ೭೫ ಮತ್ತು ಬಿಎಲ್ಸಿ ಹೂಡಿಕೆ ಆಯ್ಕೆಗಳನ್ನು ವಿಸ್ತರಿಸಲು ಸರ್ಕಾರ ಅನುಮೋದನೆ ನೀಡಿದೆ. ಇದು ಸರ್ಕಾರೇತರ ಚಂದಾದಾರರಿಗೆ ಲಭ್ಯವಿರುವ ವಿಶಾಲ ಶ್ರೇಣಿಯ ಹೂಡಿಕೆ ಆಯ್ಕೆಗಳಿಗಾಗಿ ಕೇಂದ್ರ ಸರ್ಕಾರಿ ನೌಕರರ ನಿರಂತರ ಬೇಡಿಕೆಗೆ ಅನುಗುಣವಾಗಿದೆ. ನಿವೃತ್ತಿ ಯೋಜನೆಯಲ್ಲಿ ನಮ್ಯತೆ ಹೆಚ್ಚಿಸಲು ಮತ್ತು ವೈಯಕ್ತಿಕ ಆದ್ಯತೆಗಳಿಗೆ ಅನುಗುಣವಾಗಿ ಉದ್ಯೋಗಿಗಳು ತಮ್ಮ ನಿವೃತ್ತಿ ಕಾರ್ಪಸ್ ಅನ್ನು ನಿರ್ವಹಿಸಲು ಅನುವು ಮಾಡಿಕೊಡಲು ಈ ಆಯ್ಕೆಗಳನ್ನು ವಿನ್ಯಾಸಗೊಳಿಸಲಾಗಿದೆ. ಎನ್‌ಪಿಎಸ್ ಮತ್ತು ಯುಪಿಎಸ್ ಅಡಿಯಲ್ಲಿ, ಕೇಂದ್ರ ಸರ್ಕಾರಿ ನೌಕರರು ಈಗ ಡೀಫಾಲ್ಟ್ ಆಯ್ಕೆಯಂತಹ ಹೂಡಿಕೆ ಆಯ್ಕೆಗಳ ಶ್ರೇಣಿಯನ್ನು ಆಯ್ಕೆ ಮಾಡಬಹುದು. ಈ ನಿರ್ಧಾರವು ಹೆಚ್ಚಿನ ಆಯ್ಕೆಗಳು, ಗ್ಲೈಡ್ ಪಥ

ಕಾರ್ಯವಿಧಾನ, ಮತ್ತು ಮಾಹಿತಿಯುಕ್ತ ಯೋಜನೆಗೆ ಬೆಂಬಲದಂತಹ ಪ್ರಮುಖ ಪ್ರಯೋಜನಗಳನ್ನು ಒದಗಿಸಲಿದೆ.

<><><><>

ಅಫ್ಘಾನಿಸ್ತಾನದ ತಾಲಿಬಾನ್ ಸರ್ಕಾರವು ಹಲವಾರು ಭಾರತೀಯರನ್ನು ಬಂಧಿಸಿದೆ ಎಂದು ಸಾಮಾಜಿಕ ಮಾಧ್ಯಮ ಚಾನೆಲ್ ಗಳಲ್ಲಿ ಪ್ರಸಾರವಾಗುತ್ತಿರುವ ಸಂದೇಶವನ್ನು ಸರ್ಕಾರ ತಳ್ಳಿಹಾಕಿದೆ. ಪೋಸ್ಟ್ ನಲ್ಲಿ ಬಳಸಲಾದ ವಿಡಿಯೊ ಹಳೆಯದು ಮತ್ತು ೨೦೨೧ರದ್ದು ಎಂದು ಪ್ರೆಸ್ ಇನ್ಫರ್ಮೇಷನ್ ಬ್ಯೂರೋದ ಫ್ಯಾಕ್ಟ್ ಚೆಕ್ ಘಟಕವು ಸಾಮಾಜಿಕ ಮಾಧ್ಯಮ ಪೋಸ್ಟ್ ನಲ್ಲಿ ತಿಳಿಸಿದೆ. ಸಾಮಾಜಿಕ ಮಾಧ್ಯಮಗಳಲ್ಲಿ ಇಂತಹ ಸುದ್ದಿಗಳ ಪ್ರಚಾರದ ಬಗ್ಗೆ ಜಾಗರೂಕರಾಗಿರಬೇಕು ಮತ್ತು ಅಂತಹ ವಿಷಯವನ್ನು ಮೊಬೈಲ್ ಸಂಖ್ಯೆ ೮೭೯೯೭೧೧೨೫೯ ಅಥವಾ factcheck@pib.gov.in ಗೆ ಇಮೇಲ್ ಮೂಲಕ ವರದಿ ಮಾಡಬೇಕು ಎಂದು ಪಿಐಬಿ ಸೂಚಿಸಿದೆ.

<><><><>

ಪ್ರಧಾನಿ ನರೇಂದ್ರ ಮೋದಿ ನವೆಂಬರ್ ೧ ರಂದು ಹುತಾತ್ಮ ವೀರ್ ನಾರಾಯಣ್ ಸಿಂಗ್ ಬುಡಕಟ್ಟು ಸ್ವಾತಂತ್ರ್ಯ ಹೋರಾಟಗಾರ ಸ್ಮಾರಕ ಮತ್ತು ವಸ್ತುಸಂಗ್ರಹಾಲಯವನ್ನು ಉದ್ಘಾಟಿಸಲು ಛತ್ತೀಸ್‌ಗಢಕ್ಕೆ ಭೇಟಿ ನೀಡಲಿದ್ದಾರೆ. ಈ ಸಂದರ್ಭದಲ್ಲಿ ಅವರು, ಛತ್ತೀಸ್‌ಗಢದ ೨೫ನೇ ಸಂಸ್ಥಾಪನಾ ದಿನಾಚರಣೆ - ಬೆಳ್ಳಿ ಮಹೋತ್ಸವದ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ.

ಪ್ರಧಾನಿ ಭೇಟಿ ಹಿನ್ನೆಲೆಯಲ್ಲಿ ಸತ್ಯ ಸಾಯಿ ಆಸ್ಪತ್ರೆಯಲ್ಲಿ ಉನ್ನತ ಮಟ್ಟದ ಆರೋಗ್ಯ ಸಂಪರ್ಕ ಕಾರ್ಯಕ್ರಮವನ್ನು ನಿಗದಿಪಡಿಸಲಾಗಿದೆ, ನಂತರ ಪ್ರಜಾಪಿತ ಬ್ರಹ್ಮಕುಮಾರಿ ಧ್ಯಾನ ಕೇಂದ್ರದಲ್ಲಿ ಆಧ್ಯಾತ್ಮಿಕ ಕಾರ್ಯಕ್ರಮದಲ್ಲಿ ಪ್ರಧಾನಿ ಭಾಗಿಯಾಗಲಿದ್ದಾರೆ.

<><><><>

ಅಕ್ಟೋಬರ್ ೧೭ಕ್ಕೆ ಕೊನೆಗೊಂಡ ವಾರದಲ್ಲಿ ಭಾರತದ ವಿದೇಶಿ ವಿನಿಮಯ ಮೀಸಲು ೪.೫ ಶತಕೋಟಿ ಡಾಲರ್ ನಿಂದ ೭೦೨ ಶತಕೋಟಿಗೆ ಏರಿಕೆಯಾಗಿದೆ. ದೇಶದ ವಿದೇಶಿ ವಿನಿಮಯ ಮೀಸಲುಗಳ ಭಾಗವಾಗಿ ಭಾರತೀಯ ರಿಸರ್ವ್ ಬ್ಯಾಂಕ್ ಹೊಂದಿರುವ ಚಿನ್ನದ ಸಂಗ್ರಹವು ಮೊದಲ ಬಾರಿಗೆ ೬.೨ ಶತಲಕ್ಷ ಡಾಲರ್ ಗಳಷ್ಟು ಏರಿಕೆಯಾಗಿ ೧೦೮.೫ ಶತಕೋಟಿ ಡಾಲರ್ ದಾಟಿದೆ. ಮೀಸಲುಗಳ ಅತಿದೊಡ್ಡ ಅಂಶವಾಗಿರುವ ವಿದೇಶಿ ಕರೆನ್ಸಿ ಸ್ವತ್ತುಗಳು ವಾರದಲ್ಲಿ ೧.೭

ಶತಕೋಟಿ ಡಾಲರ್ ಗಳಿಂದ ೫೬೦ ಶತಕೋಟಿ ಡಾಲರ್ ಗಳಿಗೆ ಇಳಿದಿದೆ. ಇದು ಯುರೋ, ಪೌಂಡ್ ಮತ್ತು ಯೆನ್ ನಂತಹ ಕರೆನ್ಸಿಗಳಲ್ಲಿನ ಏರಿಳಿತಗಳಿಂದ ಪ್ರಭಾವಿತವಾಗಿದೆ.ಇದೇ ಅವಧಿಯಲ್ಲಿ ಅಂತಾರಾಷ್ಟ್ರೀಯ ಹಣಕಾಸು ನಿಧಿಯಲ್ಲಿ ಭಾರತದ ಮೀಸಲು ಸ್ಥಾನವು ೩೦ ದಶಲಕ್ಷ ಡಾಲರ್ ನಿಂದ ೪.೬೨ ಶತಕೋಟಿ ಡಾಲರ್‌ಗೆ ಇಳಿದಿದೆ.

<><><><>

ಭಾರತೀಯ ಸಾಂಖ್ಯಿಕ ಸಂಸ್ಥೆ ಮಸೂದೆ, ೨೦೨೫ರ ಕರಡು ಕುರಿತು ಪ್ರತಿಕ್ರಿಯೆಗಳು ಅಥವಾ ಸಲಹೆಗಳನ್ನು ಸಲ್ಲಿಸುವ ಅವಧಿಯನ್ನು ವಿಸ್ತರಿಸುವುದಾಗಿ ಅಂಕಿಅಂಶ ಮತ್ತು ಕಾರ್ಯಕ್ರಮ ಅನುಷ್ಠಾನ ಸಚಿವಾಲಯ ಘೋಷಿಸಿದೆ. ಸಾರ್ವಜನಿಕರು, ಮುಂದಿನ ತಿಂಗಳ ೩ ರವರೆಗೆ ಕರಡು ಕುರಿತು ತಮ್ಮ ಅಭಿಪ್ರಾಯಗಳನ್ನು ಸಚಿವಾಲಯಕ್ಕೆ ಕಳುಹಿಸಬಹುದು. ಪ್ರತಿಕ್ರಿಯೆಗಳನ್ನು ಸಲ್ಲಿಸಲು ಕರಡು ಮಸೂದೆಯು ಸಚಿವಾಲಯದ ವೆಬ್ ಸೈಟ್ ನಲ್ಲಿ ಲಭ್ಯವಿದೆ. ಸಲಹೆಗಳನ್ನು capisi-mospi@gov.in ಗೆ ಇಮೇಲ್ ಮೂಲಕ ಕಳುಹಿಸಬಹುದು.

<><><><>

ಸಿಡ್ನಿಯಲ್ಲಿ ನಡೆಯುತ್ತಿರುವ ಭಾರತ ಮತ್ತು ಆಸ್ಟ್ರೇಲಿಯಾ ನಡುವಿನ ಮೂರನೇ ಹಾಗೂ ಅಂತಿಮ ಏಕದಿನ ಕ್ರಿಕೆಟ್ ಪಂದ್ಯ ಪ್ರಗತಿಯಲ್ಲಿದೆ. ಟಾಸ್ ಗೆದ್ದು ಮೊದಲು ಬ್ಯಾಟಿಂಗ್ ಆರಂಭಿಸಿದ ಆಸ್ಟ್ರೇಲಿಯಾ ೪೬.೪ ಓವರ್‌ಗಳಲ್ಲಿ ತನ್ನೆಲ್ಲಾ ವಿಕೆಟ್ ನಷ್ಟಕ್ಕೆ ೨೩೬ ರನ್ ಗಳಿಸಿತು. ಇದಕ್ಕೆ ಉತ್ತರವಾಗಿ ಭಾರತ, ಇತ್ತೀಚಿನ ವರದಿ ಬಂದಾಗ ಎರಡು ಓವರ್‌ಗಳಲ್ಲಿ ವಿಕೆಟ್ ನಷ್ಟವಿಲ್ಲದೇ ಐದು ರನ್ ಗಳಿಸಿದೆ. ಮೂರು ಪಂದ್ಯಗಳ ಸರಣಿಯನ್ನು ಆಸ್ಟ್ರೇಲಿಯಾ ತಂಡವು ೨-೦ ಅಂತರದಲ್ಲಿ ಈಗಾಗಲೇ ವಶಪಡಿಸಿಕೊಂಡಿದೆ. ಹೀಗಾಗಿ ಈ ಪಂದ್ಯ ಔಪಚಾರಿಕವಾಗಿದೆ. ಆದಾಗ್ಯೂ ವೈಟ್ ವಾಷ್ ಮುಖಭಂಗವನ್ನು ತಪ್ಪಿಸಿಕೊಳ್ಳಲು ಪ್ರವಾಸಿ ಭಾರತ ತಂಡ ಎದುರು ನೋಡುತ್ತಿದೆ. ಏಕದಿನ ಸರಣಿಯ ನಂತರ ಉಭಯ ತಂಡಗಳ ೫ ಪಂದ್ಯಗಳ ಟಿ೨೦ ಸರಣಿ ಇದೇ ೨೯ರಿಂದ ಆರಂಭವಾಗಲಿದೆ. ಈ ಮಧ್ಯೆ, ಭಾರತ ಮತ್ತು ಶ್ರೀಲಂಕಾ ಜಂಟಿ ಆತಿಥ್ಯದಲ್ಲಿ ನಡೆಯುತ್ತಿರುವ ಮಹಿಳೆಯರ ಏಕದಿನ ವಿಶ್ವಕಪ್ ಕ್ರಿಕೆಟ್‌ನಲ್ಲಿ ಇಂದೋರ್‌ನಲ್ಲಿಂದು ಆಸ್ಟ್ರೇಲಿಯಾ ಮತ್ತು ದಕ್ಷಿಣ ಆಫ್ರಿಕಾ ತಂಡಗಳು ಮುಖಾಮುಖಿಯಾಗಲಿವೆ. ಪಂದ್ಯ ಭಾರತೀಯ ಕಾಲಮಾನ ಅಪರಾಹ್ನ ೩ಕ್ಕೆ ಆರಂಭವಾಗಲಿದೆ.

<><> ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು <><>